



# ಹಾವಿನಂತಹ ಮೀನು









**ಅಮೆರಿಕನ್ ಈಲ್ ಮೀನು ಕಡಲಾಳದಲ್ಲಿ ಬಂಡೆಗಳ ಎಡೆಯ ಸಿಹಿನೀರಿನಲ್ಲಿ ವಾಸವಾಗಿರುತ್ತವೆ. ಇತರ ಮೀನುಗಳಂತೆ ಇವುಗಳಿಗೆ ಹೊಟ್ಟೆಯ ಕೆಳಭಾಗದಲ್ಲಿ ರೆಕ್ಕೆಗಳಿರುವುದಿಲ್ಲ.**

■ **ಪ.ನಾ.ಹಳ್ಳಿ. ಹರೀಶ್ ಕುಮಾರ್**

ಇದು ಒಂದು ಬಗೆಯ ಹಾವು ಮೀನು. ಉತ್ತರ ಅಮೆರಿಕಾದ ಪೂರ್ವ ಸಮುದ್ರ ತೀರಗಳಲ್ಲಿ ಕಂಡುಬರುವ ಇದನ್ನು ಅಮೆರಿಕನ್ ಈಲ್ ಮೀನು ಎನ್ನುತ್ತಾರೆ. ಇವು ಹಾವಿನ ರೀತಿಯಲ್ಲಿ ದೇಹರಚನೆಯನ್ನು ಹೊಂದಿರುವುದರಿಂದ ಇವುಗಳಿಗೆ ಹಾವು ಮೀನುಗಳೆಂದೂ ಕರೆಯುತ್ತಾರೆ.

ಕಡಲಾಳದ ಬಂಡೆಯ ಎಡೆಗಳ ಸಿಹಿನೀರಿನಲ್ಲಿ ವಾಸಿಸುವ ಈ ಮೀನುಗಳ ವೈಜ್ಞಾನಿಕ ಹೆಸರು ಆಂಗ್ವಿಲಾ ರೋಸ್ಟ್ರಾಟಾ. ಸಾಕಷ್ಟು ಉದ್ದದ ತೆಳ್ಳಗಿನ ದೇಹವನ್ನು ಹೊಂದಿದ ಇವುಗಳ ತಲೆ ತುಂಬಾ ಸಣ್ಣದು. ನೀಳದೇಹದುದ್ದಕ್ಕೂ ಇರುವ ಈಜುರೆಕ್ಕೆಗಳು ಮುಖದಿಂದ ಸಾಕಷ್ಟು ಹಿಂದಕ್ಕಿರುತ್ತವೆ. ಉದ್ದನೆಯ ರಂಧ್ರದಂತಿರುವ ಹೊಳ್ಳೆಯ ಮೂಲಕ ಉಸಿರಾಟ ನಡೆಸುತ್ತದೆ.

ದೇಹದ ಮೇಲ್ಭಾಗವು ಕಂದು ಬಣ್ಣವನ್ನೂ, ತಳಭಾಗವು ತೆಳುವಾದ ಹಳದಿ ಬಣ್ಣವನ್ನೂ ಹೊಂದಿದೆ. ಇವುಗಳ ಹಲ್ಲುಗಳು ಸಾಕಷ್ಟು ಮೊನಚಾಗಿದ್ದು, ಇತರ ಮೀನುಗಳಿಗಿದ್ದಂತೆ ಹೊಟ್ಟೆಯ ಕೆಳಭಾಗದಲ್ಲಿ ಹುಟ್ಟು ರೆಕ್ಕೆಗಳಿರುವುದಿಲ್ಲ. ತೂಕ ಸುಮಾರು 5 ರಿಂದ 6 ಪೌಂಡುಗಳಷ್ಟು. ಸಾಮಾನ್ಯವಾಗಿ ಹುಟ್ಟಿದಾಗಿನಿಂದ ಒಂದೇ ಬಣ್ಣವಿರುವ ಈಲ್ ಮೀನುಗಳು ಎರಡು ವರ್ಷಗಳಷ್ಟು ಪ್ರಾಯದಾದಾಗ ಹಳದಿ ಬಣ್ಣಕ್ಕೆ ಬದಲಾಗುತ್ತವೆ.

ಬೆನ್ನೆಲುಬಿನಲ್ಲಿ ಹಲವಾರು ಮಣಿಗಳಿರುವುದರಿಂದ ದೇಹವನ್ನು ಯಾವ ಕಡೆಯಾದರೂ ಸುಲಭವಾಗಿ ಹೊರಳಿಸುತ್ತವೆ. ಮೈತುಂಬಾ ನುಣುಪಾದ ಚರ್ಮ ಇರುವುದರಿಂದ ಸುಲಭವಾಗಿ ಜಾರಿಕೊಳ್ಳುತ್ತವೆ. ಸಾಮಾನ್ಯವಾಗಿ ಐದಾರು ಅಡಿಗಳಷ್ಟು ಉದ್ದವಾಗಿ ಬೆಳೆಯುತ್ತವೆ. ಆದರೆ ಭೂಮಧ್ಯೆ ಪ್ರದೇಶದ ಸಮುದ್ರಗಳಲ್ಲಿ ವಾಸಿಸುವ ಕೆಲವು ಪ್ರಭೇದಗಳು, ಹತ್ತರಿಂದ ಹನ್ನೆರಡು